# 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

# ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**MVC** 699/2024 **PW**–3

**ಸಾಕ್ಷಿಗೆ ದಿನಾಂಕ:06.02.2026 ರಂದು ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಾದ ಶ್ರೀ ಎಸ ಕೆ ಪಾಟೀಲರವರಿಂದಃ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಈ ದಿನ ನ್ಯಾಯಾಲಯದ ಮುಂದೆ ಸಲ್ಲಿಸುತ್ತಿದ್ದು, ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಸಹಿ ನನ್ನದು.

ನಾನು ನನ್ನ ವಿಚಾರಣೆಗೆ ಸಂಬಂಧಿಸಿದಂತೆ ದಿಃ06–12–2025 ರಂದು ನೀಡಿರುವ ಅಂಗನ್ಯೂನತಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ 12 ಎಂದು ಹಾಗೂ ಸಾಕ್ಷಿದಾರರ ಸಹಿಯನ್ನು ನಿಪಿ 12(ಎ) ಎಂದು, ಒಟ್ಟು ಆರು ಏಕ್ಸರೆಗಳನ್ನು ನಿಶಾನೆ ಪಿ 13 ಎಂದು, entire case sheet ನ್ನು ಹಾಜರುಪಡಿಸಿದ್ದು ನಿಶಾನೆ ಪಿ 14 ಎಂದು ಗುರ್ತಿಸಲಾಯಿತು.

**ಪಾಟೀ ಸವಾಲುಃ 2 ನೇ ಎದುರುದಾರ ಪರ ವಕೀಲರಾದ ಶ್ರೀ ಎಲ್ ಡಿ ಕೆ ವಕೀಲರಿಂದಃ**

ನಾನು ಶ್ರೇಯಸ್ ಆರ್ಥೊಪಿಡಿಕ್ ನಲ್ಲಿ permanent employee ಆಗಿರುತ್ತೇನೆ. ಸದರಿ ಅರ್ಜಿದಾರರಿಗೆ ಅಪಘಾತವಾದ ನಂತರ ನಮ್ಮ ಆಸ್ಪತ್ರೆಯಲ್ಲಿ ದಾಖಲಾಗಿದ್ದು ನಿಮ್ಮ ಆಸ್ಪತ್ರೆಯ ದಾಖಲೆಗಳನ್ನು ಬೇರೆ ಯಾರಿಗಾದರೂ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ಅರ್ಜಿದಾಾರು ನಮ್ಮ ಬಳಿ ದಿಃ24–03–2024 ರಂದು ಬಂದಿರುತ್ತಾರೆ. ನಮ್ಮ ಆಸ್ಪತ್ರೆಯಲ್ಲಿ ಒಂದೊಂದು ವಿಷಯಗಳಿಗೆ ಒಂದೊಂದು rate chart ಇರುತ್ತದೆ ಎಂದರೆ ಸರಿ. ನಾವು ಯಾರಿಗಾದರೂ ಅಪರೇಷನ ಮಾಡಬೇಕೆಂದರೆ ಮೊದಲಿಗೆ ಅಡವಾನ್ಸ ಚಾರ್ಜ ತೆಗೆದುಕೊಳ್ಳುತ್ತೇವೆಂದರೆ ಸರಿ. ನಿಮ್ಮ ಆಸ್ಪತ್ರೆಯಲ್ಲಿ computerized ವ್ಯವಹಾರ ಇದೆ ಎಂದರೆ ಸಾಕ್ಷಿ ಕೆಲವೂಂದಕ್ಕೆ ಇದೆ ಆದರೆ ಬಿಲಿಂಗ್ ಕ್ಕೆ ಇಲ್ಲ ಎನ್ನುತ್ತಾರೆ. ನಮ್ಮ ಆಸ್ಪತ್ರೆಯಲ್ಲಿ ಎಲ್ಲವು computerized ಇದ್ದರು ಕೂಡಾ ನಾನು ಬಿಲಿಂಗ್ ಗೆ ಇಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಒಂದು ಏಕ್ಸರೆಗೆ ನಿಮ್ಮ ಚಾರ್ಟ ಪ್ರಕಾರ ಎಷ್ಟು ಹಣ ಇದೆ ಎಂದರೆ ಸಾಕ್ಷಿ ರೂ. 500/– ಇದೆ ಎನ್ನುತ್ತಾರೆ ಹಾಗೂ consultation charge ರೂ.300/– ಇದೆ. ನಾವು ಕೊಟ್ಟಿರುವಂತಹ ಬಿಲ್ ಗಳಲ್ಲಿ consultation ಗೆ ಆಯಿತು, ಏಕ್ಸರೆಗಾಯಿತು ನಮ್ಮ ಮನಸ್ಸಿಗೆ ಬಂದಂತೆ ಬಿಲ್

ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಮ್ಮ ಆಸ್ಪತ್ರೆ ಚಾರ್ಟನ್ನು follow ಮಾಡಿಲ್ಲವೆಂದರೆ ಸಾಕ್ಷಿ ಅದು ಸರಿ ಅಲ್ಲ ಎನ್ನುತ್ತಾರೆ.

ನಮ್ಮ ಆಸ್ಪತ್ರೆಯಿಂದ ದಿಃ26-03-2024 ರಂದು ಒಂದು ಅಡವಾನ್ಸ ರಿಸ್ಪೀಟನ್ನು ರೂ.50,000/-ಗಳಿಗೆ ಕೊಟ್ಟಿರುತ್ತೇವೆ ಎಂದರೆ ಹೌದು. ಅದೇ ರೀತಿ ದಿಃ09-04-2024 ಕ್ಕೆ cash receipt ಕೂಡಾ ರೂ.50,000/-ಗಳಿಗೆ ಅದೇ ಮೊತ್ತಕ್ಕೆ ಕೊಟ್ಟಿರುತ್ತೇವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾವು ಅಡಿಮೀಷನ ಮಾಡಿಕೊಳ್ಳುವ ಸಮಯದಲ್ಲಿ ರೂ.50,000/- ಅಡವಾನ್ಸ ಹಣ ತೆಗೆದುಕೊಂಡಿದ್ದು ಸದರಿ ಚಿಕಿತ್ಸೆಗೆ ಆದಂತಹ ಹೆಚ್ಚಿನ ಮೊತ್ತವನ್ನು ಅಂದರೆ ಉಳಿದ ಹಣವನ್ನು ದಿಃ09-04-2024 ಕ್ಕೆ ತೆಗೆದುಕೊಂಡಿರುತ್ತೇವೆ ಎಂದು ನುಡಿಯುತ್ತಾರೆ. ರೂ.50,000/- ಅಡವಾನ್ಸ ಹಣ ತೆಗೆದುಕೊಂಡಿದ್ದು ಆ ಹಣ ಜಮಾ ಆಗಿದ್ದಕ್ಕೆ ಯಾವುದೇ ದಾಖಲೆ ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಅದು ಸರಿಯಲ್ಲ. ಅರ್ಜಿದಾರರಿಗೆ 2 ಬಾರಿ ಅಪರೇಷನ ಆಗಿರುತ್ತದೆ. 2 ಬಾರಿ ಅಪರೇಷನ ಮಾಡಿದ್ದು same limb ಎಂದರೆ ಸಾಕ್ಷಿ ಬೇರೆ-ಬೇರೆ ಎನ್ನುತ್ತಾರೆ. ನಾನು 2 ಬಾರಿ ಅಪರೇಷನ ಆಗಿದೆ ಎಂದು ಹೇಳಿದ್ದು ಆ ಸಮಯದಲ್ಲಿ ಅನೆಸ್ಥೆಸಿಯಾ ಶುಲ್ಕವನ್ನು ವ್ಯತರಿಕ್ತವಾಗಿ ತೆಗೆದುಕೊಂಡಿರುತ್ತೇವೆ ಎಂದರೆ ಸರಿಯಲ್ಲ ಎನ್ನುತ್ತಾರೆ.  ದಾಖಲೆ ಹೇಳುತ್ತಿದ್ದು ಆದರು ಕೂಡಾ ನಾನು ಅದಕ್ಕೆ ವಿರುದ್ಧವಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಇವತ್ತಿನ ದಿನಗಳಲ್ಲಿ ಎಲ್ಲ ಕಡೆ computerized ವ್ಯವಹಾರ ಇದ್ದು ಆದರು ನಾವು ಕೇವಲ ಬಿಲಿಂಗ್ ಸಂಬಂಧಪಟ್ಟಂತೆ computerized ಆಗಿಲ್ಲವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಿಃ06-12-2025 ನಾನು ಅಂಗನ್ಯೂನತೆ ಪ್ರಮಾಣ ಪತ್ರ ಕೊಟ್ಟಿದ್ದು ಆ ದಿನ ಯಾವುದೇ ಎಕ್ಸರೆ ತೆಗೆದಿದ್ದೀರಾ ಎಂದರೆ ಸಾಕ್ಷಿ ತೆಗೆದಿದ್ದೇನೆ ಎನ್ನುತ್ತಾರೆ. ಏಕ್ಸರೆ ತೆಗೆದಿದ್ದಕ್ಕೆ  ನಾವು ಬಿಲ್ ತೆಗೆದುಕೊಳ್ಳುತ್ತೇವೆ. ಆ ಬಿಲ್ ನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲವೆಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಆ ದಿನ ಎಷ್ಟು ಎಕ್ಸರೆ ತೆಗೆದಿರುತ್ತೀರಿ ಎಂದರೆ ಸಾಕ್ಷಿ ಎರಡು ಎನ್ನುತ್ತಾರೆ. ಸದರಿ ದಾಖಲೆಯಲ್ಲಿ ಆರು ಎಕ್ಸರೆಗಳೆಂದು ಬರೆದಿದ್ದಾರೆ ಎಂದರೆ ಸಾಕ್ಷಿ ಅವು follow up ಎಕ್ಸರೆಗಳು ಎನ್ನುತ್ತಾರೆ. ನಾನು ದಿಃ06-12-2025 ರಂದು clinical examination ಮಾಡಿದ ಬಗ್ಗೆ ದಾಖಲೆ ಹಾಜರುಪಡಿಸಿಲ್ಲವೆಂದರೆ ಸಾಕ್ಷಿ ಹಾಜರುಪಡಿಸಿಲ್ಲ ಎನ್ನುತ್ತಾರೆ. ನಾನು clinical examination  ಮಾಡಿಲ್ಲ ಆ ಕಾರಣಕ್ಕೆ ಸದರಿ ದಾಖಲೆ ಹಾಜರುಪಡಿಸಿಲ್ಲವೆಂದರೆ ಸಾಕ್ಷಿ ಅದು ಸರಿ ಅಲ್ಲ ಎನ್ನುತ್ತಾರೆ. ನನಗೆ ಶಿರಸಿ ಗ್ರಾಮೀಣ ಪೋಲೀಸ ಠಾಣೆಯಿಂದ letter ಬಂದಿದ್ದು ಅದಕ್ಕೆ ನೀವು ರಿಪ್ಲೇ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿದ್ದೇನೆ ಎನ್ನುತ್ತಾರೆ. ಆ ದಾಖಲೆಯನ್ನು ಹಾಜರುಪಡಿಸಿಲ್ಲವೆಂದರೆ ಸರಿ. ಕೇಸ ಶೀಟ ಜೊತೆ ಇರುವ injury certificate ನ್ನು ಎಲ್ಲಿಗೆ ಕೊಟ್ಟಿದ್ದೀರಿ ಎಂದರೆ ಸಾಕ್ಷಿ ಶಿರಸಿ ಪೋಲೀಸ್ ಠಾಣೆಗೆ ಎನ್ನುತ್ತಾರೆ. ಯಾವುದೇ ಪೋಲಿಸ ಠಾಣೆಗೆ ದಾಖಲೆ ಕೊಟ್ಟರೆ ಸಹಿ ತೆಗೆದುಕೊಂಡು ಕೊಡಬೇಕು, ನಾನು ಆಗಲೆ ಕೇಳಿದರೆ ನಾನು ಯಾವುದೇ

ರೀತಿಯ ರಿಪ್ಲೆ ಕೊಟ್ಟಿಲ್ಲವೆಂದು ಹೇಳಿದ್ದು ಆದರೆ ಈಗ ಈ ದಾಖಲೆಗಳನ್ನು ಹಾಜರುಪಡಿಸಿದ್ದು ಎಲ್ಲವು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆಂದರೆ ಸರಿಯಲ್ಲ. ದಿಃ09-04-2024 ರಂದು ಒಂದು ಬಿಲ್ ಕೊಟ್ಟಿದ್ದು ಅದರಲ್ಲಿ 1 ಲಕ್ಷ ಹಣ ತೋರಿಸಿದ್ದು ಅದರಲ್ಲಿ ಅಡವಾನ್ಸ 50 ಸಾವಿರ ರೂಪಾಯಿಗಳನ್ನು ಕಡಿತ ಮಾಡಿದ ಬಗ್ಗೆ ಬರೆದಿಲ್ಲ ಎಂದರೆ ಸಾಕ್ಷಿ ಬರೆದಿಲ್ಲ ಎನ್ನುತ್ತಾರೆ. ಇಂತಹ ಬಿಲ್ ಗಳನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹೆಚ್ಚಿನ ಹಣವನ್ನು ತೋರಿಸುತ್ತಿದ್ದೇನೆಂದರೆ ಸರಿಯಲ್ಲ. ನಂದಿನಿ ಮೆಡಿಕಲ್ ಎಂಬುವವರು ನನ್ನ ತಂಗಿಗೆ ಸಂಬಂಧಿಸಿದ್ದು ಇದೆ ಎಂದರೆ ಸಾಕ್ಷಿ ಅಲ್ಲ ಎನ್ನುತ್ತಾರೆ. ನಂದಿನಿ ಮೆಡಿಕಲ್ಸರವರು ಬಿಲ್ ಗಳಲ್ಲಿ ಸೀಲ್ ಹಾಕಿದ್ದು ಅವರು ನಮ್ಮ ಆಸ್ಪತ್ರೆಯ ಹೆಸರು ಬರೆದಿರುತ್ತಾರೆ ಎಂದರೆ ಸಾಕ್ಷಿ ಸದರಿ ಮೇಡಿಕಲ್ ನಮ್ಮ ಆಸ್ಪತ್ರೆಯ premises ನಲ್ಲಿ ಇದೆ ಎನ್ನುತ್ತಾರೆ. ನೀವು ನಮ್ಮ ಆಸ್ಪತ್ರೆಯ ಹೆಸರು ಯಾಕೆ ಬರೆಯುತ್ತೀರಿ ಎಂದು ಎಂದಾದರೂ ತಕರಾರು ಮಾಡಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಂದಿನಿ ಮೆಡಿಕಲ್ಸ ರವರು ಕೊಟ್ಟಿರುವ ಬಿಲ್ ಗಳಿಗೆ ಸಂಬಂಧಿಸಿದ prescription ಇರುವುದಿಲ್ಲವೆಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ಸದರಿ prescription ಗಳು ನಮ್ಮ ಕೇಸ ಶೀಟನಲ್ಲಿ ಇಲ್ಲವೆಂದರೆ ಅದು ಸರಿಯಲ್ಲ.

ನಾನು ಮಾಡಿರುವಂತಹ ಅಪರೇಷನ success ಆಗಿದೆ ಎಂದರೆ ಸರಿ. ನಾನು ಬರೆಸಿರುವ 25 ಪ್ರತಿಶತಃ ಹಾಗೂ 10 ಪ್ರತಿಶತಃ ಇವು ಕೇವಲ particular limbs ಗೆ ಸಂಬಂಧಿಸಿದ್ದು ಎಂದರೆ ಸರಿ. ನಾನು without following norms issued the disability certificate ಎಂದರೆ ಸಾಕ್ಷಿ It is not true ಎನ್ನುತ್ತಾರೆ. ಅರ್ಜಿದಾರರಿಗೆ ಸಹಾಯ ಮಾಡುವ ದೃಷ್ಟಿಯಿಂದ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ